ಶ್ರೀ ಚೌದರಿಡ್ಡಿ.—ಅಕ್ಯಿಜಿಷನ್ ನಲುವಾಗಿ ನಿಂತಿದೆ, ಎಂದು ಹೇಳಿದ್ದೀರಿ ; ಈ ಸೇತುವೆ ಕೆರೆ ಕೊಡಿಯಲ್ಲಿರುವುದರಿಂದ ಬಸ್ಸುಗಳಿರಲಿ ಕೆರೆಯ ಒಳಗೆ ಹೋಗುತ್ತಿವೆ ಅಲ್ಲಿನ ಜನಗಳಿಗೆ ಲೋಕೋಪಯೋಗಿ ಇಲಾಖೆ ಇದೆಯೇ ಇಲ್ಲವೊ ಎನ್ನುವ ಸಂಶಯ ಬಂದಿದೆ. ಈ ಬಗ್ಗೆ ಏನು ಹೇಳುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್.—ಪ್ರಾರಂಭದಲ್ಲಿ ಲಿಂಕ್‌ರೋಡಿಗೆ ಸೇತುವೆ ಕಟ್ಟಬೇಕಾಗಿದ್ದು ದರಿಂದ ಭೂಮಿ ಕೊಡವೆ ತೊಂದರೆಯಾಗಿತ್ತು. ಈಗ ಭೂಮಿ ಬಂದಿದೆ ಈ ಕೆಲಸವನ್ನು ಆದಷ್ಟು ಬೇಗ ಮುಗಿಸಬೇಕೆಂದು ಚೀಫ್ ಇಂಜಿನಿಯರ್‌ರವರಿಗೆ ಈಗಾಗಲೇ ಆದೇಶ ಕೊಟ್ಟಿದ್ದೇವೆ.

Grazing Lands in Belgaum District

800 SRI P.P. HEGDE (Chikodi).—Will the Minister for Revenue be pleased to state,

(*a*) whether it is a fact that all the grazing lands in Belgaum District which were vested in Panchyats, Municipalities and some Societies such as cattle breeding Societies have been divested in Government.

(*b*) if so, relevant G. O. No. and the date of the same.

(*c*) the extent of grazing land divested in Government (information be furnished taluk-wise in Belgaum District.

(*d* out of that the extent of land fit for cultivation ; (information be funished taluk-wise in Belgaum District.)

(*e*) whether Government intends to distribute such (cultivable) lands among the poor landless agricultural labourers ? (Information be furnished in respect of Belgaum District, taluk-wise)?

SRI N. HUTCHMASTHY GOWDA (Minister for Revenue).—

(*a*) Only grazing lands including gomal lands vested in the Panchayats stand resumbed to Government.

(*b*) Government Notification No RDC 398 BAQ 75 dated 11-2-1976

(*c*) *Extent of grazing area resumed to Government in Belgaum District*

1.	Bailhongal	...	...	3,163-06
2.	Ramdurg	...	...	4,698-05
3.	Athani	...	...	7,012-19
4.	Hukkeri	...	...	9 137-00
5.	Chikodi	...	...	9,316-23
6.	Gokak	...	...	3,750-00
7.	Parsgad	...	...	9,052-22
8.	Raibag	...	...	7,374-00
9.	Belgaum	...	...	14,512-00
10	Khanapur	...		10,157-00

(d) *Extent of area fit for cultivation.*

Area fit for cultivation will be decided only after classification is done by the Agricultural Department.

(e) Government intends to distribute cultivable land to the poor landless people as per K. L. G. Rules, 1969, where the extent of the grazing land in the village exceeds the minimum requirements of cattle strength at the scale prescribed in rule 97 of the Karnataka Land Revenue Rules, 1966

ಶ್ರೀ ಪಿ. ಪಿ. ಹೆಗಡೆ —ಸ್ವಾಮಿ, ತಮ್ಮ ಉತ್ತರದಲ್ಲಿ ಪಂಚಾಯಿತಿಗಳ ವಶದಲ್ಲಿರುವ ಗೋಮಾಳ ಜಮೀನು ಒಳಗೊಂಡಂತೆ ಹುಲ್ಲುಗಾವಲು ಜಮೀನು ಮಾತ್ರ ಸರ್ಕಾರದವರು ವಹಿಸಿಕೊಂಡಿದ್ದಾರೆಂದು ತಿಳಿಸಿದ್ದೀರಾ ? ಪಂಚಾಯಿತಿವಶದಲ್ಲಿರುವ ಜಮೀನುಗಳನ್ನು ಸರ್ಕಾರ ವಹಿಸಿಕೊಂಡ ಉದ್ದೇಶ ಏನು ?

† ಶ್ರೀ ಎನ್. ಹುಚ್ಚಮಾಸ್ತಿಗೌಡ —ಅದರ ಉದ್ದೇಶ ಏನು ಎಂದರೆ, ಗೋಮಾಳಕ್ಕೆ ಸಂಬಂಧ ಪಟ್ಟ ಭೂಮಿಯಲ್ಲಿ ಬಹಳ ಜನ ಅಕ್ರಮಸಾಗುವಳಿ ಮಾಡಿದ್ದುದರಿಂದ ಅದರ ಹೆಚ್ಚಿನ ಹತೋಟಿ ಇಟ್ಟು ಕೊಳ್ಳುವ ಉದ್ದೇಶದಿಂದ ನೇರವಾಗಿ ರೆವಿನ್ಯೂ ಇಲಾಖೆ ವಹಿಸಿಕೊಳ್ಳಬೇಕಾಯಿತು.

ಶ್ರೀ ಪಿ. ಪಿ. ಹೆಗಡೆ.—ಸೊಸೈಟಿ ಜಮೀನುಗಳು ಹಾಗೂ ಮುನಿಸಿಪಾಲಿಟಿ ಜಮೀನುಗಳನ್ನು ತಾವು ಏತಕ್ಕೆ ವಶಕ್ಕೆ ತೆಗೆದುಕೊಳ್ಳಲ್ಲಿಲ್ಲ ? ಇದಕ್ಕೆ ಕಾರಣ ಹೇಳಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗೋಮಾಳಕ್ಕೆ ಸಂಬಂಧಪಟ್ಟ ಭೂಮಿ ಅಕ್ರಮ ಸ್ವಾಧೀನವಾಗಿ ದುರುಪಯೋಗವಾಗಿದೆ. ಇಂಥ ಲ್ಯಾಂಡನ್ನು ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಹಂಚಿಕೆ ಮಾಡುವುದಕ್ಕೆ ಸಾಧ್ಯವಿಲ್ಲದೆ ತೊಂದರೆ ಯಾಗಿತ್ತು. ಇದನ್ನು ತಪ್ಪಿಸಲಿಕ್ಕಾಗಿ ನೇರವಾಗಿ ರೆವಿನ್ಯೂ ಇಲಾಖಾ ಅಧಿಕಾರಿಗಳ ಮೂಲಕ ಕ್ರಮವಹಿಸುವ ಉದ್ದೇಶದಿಂದ ಕ್ರಮ ತೆಗೆದುಕೊಂಡಿದೆ. ಉಳಿದ ಮುನಿಸಿಪಾಲಿಟಿ ಗಳಲ್ಲಿ ಹಿಂದೆ ಇದ್ದ ಗೌರ್ನಮೆಂಟ್ ಆರ್ಡರ್ ಪ್ರಕಾರ ಅನೇಕ ಜಮೀನುಗಳು ಇವೆ, ಗೋಮಾಳ ಲ್ಯಾಂಡ್, ಪ್ಲೇಗ್ರೌಂಡ್ ಹಾಗೂ ವಿಲೇಜ್ ಫಾರೆಸ್ಟ್ ಲ್ಯಾಂಡ್ ಎಂದು ಇದೆ. ಅದನ್ನು ಬಿಟ್ಟು ಗೋಮಾಳ ಮಾತ್ರ ತೆಗೆದುಕೊಂಡಿದೆ.

AN HON'BLE MEMBER.—May I know what steps the Government will take in respect of gomal and grazing lands cultivated by Yuvak Mandals ?

SRI N. HUCHMASTHI GOWDA.—We have passed a law and we are taking action to evict all these.

ಶ್ರೀ ಟಿ. ಎಂ. ಮಂಜುನಾಥ್ —ಸ್ವಾಮಿ, ಪಶುಸಂಪತ್ತನ್ನು ಹೆಚ್ಚು ಬೆಳೆಸತಕ್ಕ ದೃಷ್ಟಿಯಿಂದ ಗೋಮಾಳವನ್ನು ಕೂಡ ಹೆಚ್ಚು ರಿಲೀಸ್ ಮಾಡುತ್ತಿದ್ದೀರಿ. ಪಶುಸಂಪತ್ತು ಮುಂದೆ ಹೆಚ್ಚು ಪ್ರಮಾಣದಲ್ಲಿ ಹೆಚ್ಚಬಹುದು ಎನ್ನುವ ದೃಷ್ಟಿಯಿಂದ ಗೋಮಾಳಗಳನ್ನು ರಕ್ಷಣೆ ಮಾಡಲು ಸರ್ಕಾರ ಉದ್ದೇಶ ಇಟ್ಟುಕೊಂಡಿದೆ. ಎರಡನೆಯದು ಎಂದರೆ ಈಗಾಗಲೇ ಅನೇಕ ಜನ ಬಡವರು ಗೋಮಾಳ ಜಮೀನುಗಳಲ್ಲಿ ಅನೇಕ ವರ್ಷಗಳಿಂದಲೂ ಬೆಳೆ ತೆಗೆದುಕೊಳ್ಳುತ್ತಾ ಬಂದಿದ್ದಾರೆ. ಇಂಥವರ ಅರ್ಜಿಗಳನ್ನು ರದ್ದು ಮಾಡಿ ಅವನನ್ನು ಬಿಡಿಸಿ ಹೊಸ ಅರ್ಜಿಗೆ ಕೊಡತಕ್ಕ ವ್ಯವಸ್ಥೆ ನಡೆಯುತ್ತಿದೆ, ಇದನ್ನು ತಡಹಿಡಿದು ಅನೇಕ ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರುವ ಬಡಪರಿಗೆ ಕೊಡುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಮುಂದೆ ಬರತಕ್ಕ ಗೋಸಂಪತ್ತನ್ನು ಅಂದಾಜು ಮಾಡಿ ಈಗಲೇ ಜಮೀನು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ನಿನ್ನೆ ಫೆಬ್ರವರಿ ೧೯೭೬ರಲ್ಲಿ ಗೋಮಾಳವನ್ನು ಪರಭಾರೆ ಮಾಡಬಾರದೆಂ ಎಲ್ಲಾ ಜಮೀನುಗಳಲ್ಲಿ ಲ್ಯಾಂಡ್ ಗ್ರಾಂಟ್ಸ್ ರೂಲ್ಸ್ ಪ್ರಕಾರ ಮಂಜೂರು ಆಗಬೇಕೆಂ ಎಂದು ಸರ್ಕಾರಿ ಆಜ್ಞೆ ಹೊರಡಿಸಿದ್ದಾರೆ. ಗೋಮಾಳ ಜಮೀನುಗಳಲ್ಲಿಯೂ ಸಹ ಬಡವರಿಗೆ ಜಮೀನು ಸಿಗುವುದಿಲ್ಲ. ಈ ಗೌರ್ನಮೆಂಟ್ ಆರ್ಡರ್ ಮಾಡಿರುವುದರಿಂದ ಅನೇಕ ಜನಕ್ಕೆ ತೊಂದರೆ ಯಾಗಿದೆ, ಇದನ್ನು ಸಡಿಲು ಮಾಡಿ ಬಡವರಿಗೆ ಅರುಕೂಲವಾಗುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ನಮ್ಮ ರಾಜ್ಯದಲ್ಲಿ ಜನಸಂಖ್ಯೆ ಎಷ್ಟಿದೆಯೋ ಪಶುಸಂಪತ್ತು ಅಷ್ಟೇ ಇದೆ. ಪಶುಗಳು ಮೇಯುವುದಕ್ಕೆ ಜಾಗಬೇಕು, ಅದಕೋಸ್ಕರ ಹಿಂದೆ ಗೋಮಾಳಗಳನ್ನು ಮಾಡಿಕೊಂಡು ಬಂದಿದ್ದಾರೆ. ಈಗ ಗೋಮಾಳಗಳನ್ನು ವ್ಯವಸಾಯ ಇಲಾಖೆಯವರು ವರ್ಗೀಕರಣ ಮಾಡುತ್ತಿದ್ದಾರೆ. ವ್ಯವಸಾಯಕ್ಕೆ ಅರ್ಹವಾಗಿರುವುದು ಏಷ್ಟು, ಅರ್ಹವಾಗಿಲ್ಲದ ಭೂಮಿ ಎಷ್ಟು ಎಂದು ಅಂದಾಜು ಮಾಡುತ್ತಾರೆ, ಅರ್ಹವಲ್ಲದೇ ಇರತಕ್ಕದ್ದು ಗೋಮಾಳವಾಗುತ್ತದೆ, ಆದರೆ ಎಲ್ಲಾ ಕಡೆ ಗೋಮಾಳ ಜಮೀನು ವಜಾಮಾಡಿ ಎಂದು ಹೇಳಿದರೆ ಕಷ್ಟವಾಗುತ್ತದೆ ಈಗ ನಮ್ಮ ರಾಜ್ಯದಲ್ಲಿ ಅನೇಕ ಯೋಜನೆಗಳು ಇವೆ ಪಶುಸಂಪತ್ತು ಹೆಚ್ಚು ಮಾಡಬೇಕು, ಕುರಿ ಹೆಚ್ಚು ಮಾಡಬೇಕೆಂದು ಈ ರೀತಿಯ ಯೋಜನೆಗಳು ಇರುವುದರಿಂದ ಎಲ್ಲಿಲ್ಲಿ ಗೋಮಾಳಗಳು ಇವೆಯೋ ಅವುಗಳನ್ನು ಉಳಿಸಿ ಕೊಳ್ಳಬೇಕಾಗುತ್ತದೆ.

ಶ್ರೀ ವಿ ಎಸ್. ಪಾಟೀಲ.—ಸ್ವಾಮಿ, ಗೋಮಾಳದಲ್ಲಿ ಅನ್ ಆಥರೈಸ್ಡ್ ಆಗಿ ಸಾಗುವಳಿ ಮಾಡಿ ರುವವರು ಜಮೀನು ಇದ್ದವರೇ ಮಾಡಿ ರೆಗ್ಯೂಲರೈಸ್ ಮಾಡಿಸಿ ಕೊಂಡಿದ್ದಾರೆ. ಜಮೀನು ಇಲ್ಲದ ಬಡವರಿಗೆ ಕೊಡುವ ಬಗ್ಗೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಅನ್ ಆಥರೈಸ್ಡ್ ಅಕ್ಯುಪೇಷನ್ ಆಗಿರುವವರಿಗೆ ರೆಗ್ಯು ಲರೈಸ್ ಮಾಡುತ್ತೇವೆ ಎಂದು ಹೇಳಿಲ್ಲ, ಅನೇಕ ಜನರು ಭೂಮಿ ಉಳ್ಳಂತವರು ಅಕ್ರಮ ಸಾಗುವಳಿ ಮಾಡಿದ್ದಾರೆ. ಅದನ್ನು ತಪ್ಪಿಸುವ ಉದ್ದೇಶದಿಂದ ಕಾನೂನು ಬದಲಾವಣೆ ಮಾಡಿದ್ದೇವೆ ಶ್ರೀಮಂತರು ಎನ್ನತಕ್ಕದ್ದು ಇಲ್ಲ. ಎಲ್ಲರಿಂದಲೂ ತಪ್ಪಿಸುತ್ತೇವೆ. ಇದರಲ್ಲಿ ತೀರಾ ಬಡವರಾಗಿದ್ದು ವ್ಯವಸಾಯವನ್ನೇ ಅವಲಂಬಿಸಿರುವ ಕಡೆ ಲ್ಯಾಂಡ್ ಗ್ರಾಂಟ್ಸ್ ರೂಲ್ಸ್ ಪ್ರಕಾರ ಅವರ ಅರ್ಜಿಗಳನ್ನು ಪರಿಶೀಲನೆ ಮಾಡ ಬಹುದು ಎಂದು ತಿಳಿಸಿದ್ದೇನೆ, ಆ ರೀತಿ ಕ್ರಮ ಅನುಸರಿಸುತ್ತೇವೆ.

ಶ್ರೀ ಪಿ. ಪಿ. ಹೆಗಡೆ.—ಸ್ವಾಮಿ, ಬೇಸಾಯಕ್ಕೆ ಯೋಗ್ಯವಾದ ಜಮೀನನ್ನು ಬಡವರಿಗೆ ಹಂಚಿ ತ್ತೇವೆ ಎಂದು ಹೇಳುತ್ತೀರಿ. ಈಗ ಲ್ಯಾಂಡ್ ರೆವಿನ್ಯೂ ಗ್ರಾಂಟ್ಸ್ ರೂಲ್ಸ್ ಪ್ರಕಾರ, ಅಷ್ಟು ಜಮೀನಿ ಗಿಂತ ಹೆಚ್ಚಿಗೆ ಇದ್ದರೆ ಬರುತ್ತದೆ ಎಂದ ಹೇಳುತ್ತೀರಿ, ಲ್ಯಾಂಡ್ ರೆವಿನ್ಯೂ ರೂಲ್ಸ್ ಪ್ರಕಾರ ಎಷ್ಟು ಅಲಾಟ್‌ಮೆಂಟ್ ಬೇಕು ಅಷ್ಟು ಸಿಕ್ಕುವುದಿಲ್ಲ ಇನ್ನೊಂದು ಅರ್ಥದಲ್ಲಿ ನಾನು ಮೊದಲನೇ ಪ್ರಶ್ನೆ ಕೇಳಿದ್ದು ಕ್ಯಾಟಲ್ ಬ್ರೀಡಿಂಗ್ ಸೊಸೈಟಿಯಿಂದ ಮಾಡಿದರೂ ದೊಡ್ಡ ದೊಡ್ಡ ಶ್ರೀಮಂತರು, ಆ ಜಮೀನನ್ನು ಸರ್ಕಾರಿ ಮಾಡಿಕೊಂಡಿಲ್ಲ, ಇದರ ಅರ್ಥ ಇರುವವನಿಗೆ ಸಹಾಯವಾಗುತ್ತದೆ, ಬಡ ಜನರು ಉಪವಾಸ ಸಾಯುತ್ತಾರೆ, ಈಗ ಕ್ಯಾಟಲ್ ಬ್ರೀಡಿಂಗ್ ಸೊಸೈಟಿಯವರದು ಎನು ಇದೆ, ಇದನ್ನು ಸರ್ಕಾರದವರು ವಶ ಮಾಡಿ ಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕ್ಯಾಟಲ ಬ್ರೀಡಿಂಗ್ ಸೊಸೈಟಿಯವರಿಗೆ ಜಮೀನು ಆಗಲೇ ಕೊಟ್ಟಿದ್ದರೆ, ಲ್ಯಾಂಡ್ ರಿಫಾರವ್ಸ್ ಆಕ್ಟ್ ಪ್ರಕಾರ ಬಿಟ್ಟು ಕೊಡಬೇಕಾಗುತ್ತದೆ. ಸೊಸೈಟಿಗಳು ಜಮೀನು ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ. ಹಾಗೆ ಅವರು ಇಟ್ಟುಕೊಂಡಿದ್ದರೆ ಲ್ಯಾಂಡ್ ರಿಫಾರವ್ಸ್ ಆಕ್ಟ್ ಪ್ರಕಾರ ಸರ್ಕಾರಕ್ಕೆ ಬರಬೇಕಾಗುತ್ತದೆ. ಮತ್ತೆ ಈಗ ಇರತಕ್ಕಂತಹ ಭೂಮಿಯನ್ನು ವರ್ಗೀಕರಣ ಮಾಡಬೇಕೆಂದು ವ್ಯವಸಾಯ ಇಲಾಖೆಯವರು ಮಾಡುತ್ತಿದ್ದಾರೆ. ಎ, ಮತ್ತು ಬಿ, ವರ್ಗಧ ಭೂಮಿ ವ್ಯವಸಾಯಕ್ಕೆ ಅರ್ಹವಾಗಿರುವ ಭೂಮಿ. ಎ, ಮತ್ತು ಬಿ, ವರ್ಗಕ್ಕೆ ಸ್ವಲ್ಪ ವ್ಯತ್ಯಾಸ ಇದೆ ಇನ್ನು ಸಿ, ಮತ್ತು ಡಿ, ವರ್ಗದ ಭೂಮಿ, ವ್ಯವಸಾಯಕ್ಕೆ ಅರ್ಹವಲ್ಲದ ಭೂಮಿ, ಅದು ಗೋಮಾಳವಾಗಿ ಉಳಿಯು ತ್ತದೆ. ಎ ಮತ್ತು ಬಿ ವರ್ಗಗಳಲ್ಲಿ, ವ್ಯವಸಾಯಕ್ಕೆ ಅರ್ಹವಾಗಿರುವ ಭೂಮಿ ಹೆಚ್ಚಿಗೆ ಇದ್ದರೆ ಗೋಮಾಳದಿಂದ ತೆಗೆದುಕೊಡುತ್ತೇವೆ. ಮತ್ತೆ ಪಕ್ಕದಲ್ಲಿ ಅರಣ್ಯ ಇದ್ದು, ಅಲ್ಲಿ ಮೇಯಿಸುವುದಕ್ಕೆ ಅವಕಾಶ ಇದ್ದರೆ, ಕಡಿಮೆ ಮಾಡಿಕೊಡುವುದಕ್ಕೆ ಸಾಧ್ಯ, ಗೋಮಾಳ ಉಳಿಯದೆ ಕೊಟ್ಟುಬಿಡುತ್ತಾರೆ ಎಂದರೆ ಅದನ್ನು ಸಾರ್ವತ್ರಿಕವಾಗಿ ಒಪ್ಪಿ ಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಬಿ ಎಂ. ಪೊರಕೇರಿ.—ಸ್ವಾಮಿ, ದಿನ ನಿತ್ಯ ದನಗಳನ್ನು ಒಂದೇ ಕಡೆ ಮೇಯಿಸುವುದರಿಂದ ಅಲ್ಲಿ ಸರಿಯಾದ ಮೇವು ಸಿಕ್ಕುವುದಿಲ್ಲ, ಆದ್ದರಿಂದ ಬೇರೆ ಬೇರೆ ಕಂಪಾರ್ಟ್‌ಮೆಂಟ್ ಮಾಡಿ ದಿನ ಒಂದಕ್ಕೆ ಒಂದೊಂದು ಜಾಗ ಕೊಟ್ಟರೆ, ಹೆಚ್ಚು ಮೇವು ಬೆಳೆಸಲಿಕ್ಕೆ ಸಾಧ್ಯವಾಗುತ್ತದೆ, ಆ ರೀತಿ ಮಾಡುವುದಂ ಸೂಕ್ತವಲ್ಲವೇ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಗೋಮಾಳ ಯಾವರೀತಿ ಅಭಿವೃದ್ಧಿ ಮಾಡಬೇಕು ಎಂಬ ಬಗ್ಗೆ ಪ್ರಶ್ನೆ ಕೊಳ್ಳುತ್ತಿದ್ದಾರೆ, ಈ ಸಂದರ್ಭದಲ್ಲಿ ಹೇಗೆ ಅಭಿವೃದ್ಧಿ ಮಾಡಬೇಕು ಎನ್ನುವ ಬಗ್ಗೆ ಉತ್ತರ ಹೇಳುವುದಕ್ಕಾಗುವುದಿಲ್ಲ, ಅದಕ್ಕೆ ಪ್ರತ್ಯೇಕ ಪ್ರಶ್ನೆ ಕಳಂಹಿಸಿದರೆ, ಅದನ್ನು ಯಾವರೀತಿ ಮಾಡಬೇಕು ಎಂಬ ಬಗ್ಗೆ ತಜ್ಞರಿಂದ ಸಲಹೆ ಪಡೆದು ಉತ್ತರ ಕೊಡುವುದಕ್ಕೆ ಆಗುತ್ತದೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ಈಗ ಲ್ಯಾಂಡ್ ಗ್ರಾಂಟ್ಸ್ ರೂಲ್ಸ್ ಪ್ರಕಾರ ಮಂಜೂರು ಮಾಡಿದ್ದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ, ಈಗ ಅವರಿಗೆ ಎವಿಕ್ಷನ್ ಮಾಡದರೀತಿಯಲ್ಲಿ ರಕ್ಷಣೆ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎವಿಕ್ಷನ್ ಮಾಡುವಾಗ ಅಂತಹವರಿಗೆ ಮಾಡಿ, ಇಂತಹವರಿಗೆ ಮಾಡಬೇಡಿ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲರದನ್ನು ಎವಿಕ್ಟ್ ಮಾಡಿಸಬೇಕು, ನಂತರ ಲ್ಯಾಂಡ್ ಗ್ರಾಂಟ್ಸ್ ರೂಲ್ಸ್ ಪ್ರಕಾರ ನೋಡಿಸಬೇಕಾಗುತ್ತದೆ.

SRI M. M. KHARGE.—In Gulbarga Division nearly 90 per cent Scheduled Caste people are cultivating the grazing land and as per the recent notification of Government thousands of those S. Cs and S. Ts peope have been evicted and nearly lakhs of rupees worth of crops have been destroyed by the Revenue Officers. May I know the steps the Government is going to take to safeguard the interests of such cultivators who are cultivating the land since 1958 till to-date ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರಿಂದ ನನಗೆ ಆಶ್ಚರ್ಯವಾಗುತ್ತದೆ, ಇರತಕ್ಕಂತಹ ಬೆಳೆಯನ್ನು ಹಾಳುಮಾಡಿ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ ಎಂದು ಹೇಳಿದರೆ ನಮ್ಮ ಅಧಿಕಾರಿಗಳು ಇಷ್ಟು ದಕ್ಷತೆಯಿಂದ ಕೆಲಸ ಮಾಡಿ ಈ ರೀತಿ ಮಾಡಿದ್ದಾರೆ ಎಂದು ನನಗೆ ನಂಬಿಕೆ ಹುಟ್ಟುವುದಿಲ್ಲ. ಒಂದು ಪಕ್ಷ ಆ ರೀತಿ ಆಗಿದ್ದರೆ ಕೂಡಲೇ ಎಲ್ಲೆಲ್ಲಿ ಆಪ್ಶೆಲಬಲ್ ಇದೆ, ಕೊಡಲಕ್ಕೆ ಸಾಧ್ಯ ಇದೆ, ಅಂತಹ ಕಡೆ ಕೂಡಲೇ ವ್ಯವಸ್ಥೆ ಮಾಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಒಂದೆರಡು ತಿಂಗಳೊಳಗೆ ರ್ಯಾಂಡ್ ಗ್ರಾಂಟ್ಸ್ ಕಮಿಟಿ ಕರೆದು ಅವರ ಮುಖಾಂತರ ಹಂಚಿಕೆ ಮಾಡಬೇಕೆಂದು ತಿಳಿಸಿದ್ದೇವೆ.

MADAM SPEAKRR.—Question No : 880 and 823 are held one.

Repairs to Bangalore Gulbarga Road

837. SRI M. M. KHARGE (Gurmitakal).—Will the Minister for Public Works pleased to state.—

(*a*) Whether Government are aware that the Bangalore-Gulbarga Road *via* Bellary, Siruguppa, Sindhnoor and Lingasugar is in a very bad condition;

(*b*) if so, the action Government intend to take to repair this road and when ?